ಮೈಸೂರ ಗೆಜೆಟ್ಟ

ನಂ. 15 ಸರ್ಕಾರದಿಂದ ಪಾಯಿಷ್ ಆದ್ದು. ಸನ್ 1890.

ಬೆಂಗಳೂರು, ಶನಿವಾರ, ಏಪ್ರೆಲ್ ತಾ|| 19, ಸನ್ 1890.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪೆಲ್ ಜೋರ್ಡು ಪ್ರೆಸಿಡೆಂಟರು, ಡಿಸ್ಟ್ರಿಕ್ಟು ವ ಸೆರ್ಷ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಫೋಸ್ಟ್ಪಾಫಿಸ್ ನೋಟಿಸ್‌ಗಳು.

3ನೇ ಭಾಗ—ಶ್ರೀಮತ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್ಸುಗಳು ವ ರೆಗ್ಯುಲೇರ್ಷಗಳು—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲ.

1ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್

ಇಸ್ತಿಹಾರ್‌ನಾಮೆ.

ತಾರೀಖು 19ನೇ ಮಾರ್ಚಿ 1890.

ಕ್ಯಾಂಪ್ ನಂ. 1022.—(1888ನೇ ಇಸವಿಯ 4ನೇ ರೆಗ್ಯುಲೇರ್ಷ ಯಂಬ) ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 236ನೇ ಸೆಕ್ಷನಿನ 2ನೇ ಕಲಮಾನುಸರಿಸಿ ಸರಕಾರದ ವಿಚಾರಣೆಯೊಳಗೆ ಬಂದಿರುವ ದೇವನಹಳ್ಳಿ ತಾಲ್ಲೂಕು ಪೈಕಿ ಜೋಡಿ ಮಲಿನೇ ನಹಳ್ಳಿ ಗ್ರಾಮಕ್ಕೆ, ಸದರೀ ಕೋಡಿನ 8 ವ 9ನೇ ಚಾಪ್ಟರುಗಳ ನಿಬಂಧನೆಗಳು ಲಗಾವಾಗಿರತಕ್ಕದ್ದೆಂದು ಮೈಸೂರು ಸೀಮೆಯ ಶ್ರೀಮನ್ಮಹಾರಾಜಾ ಸರ್ಕಾರದವರು ಆಜ್ಞಪಿಸಿರುತ್ತಾರೆ.

ತಾರೀಖು 13ನೇ ಏಪ್ರೆಲ್ 1890.

ಕ್ಯಾಂಪ್ ನಂ. 65.—ವೆ|| ನರಹರಿರಾಯರು, ಕಾಯಿಲೆ ಸಬಬು ತುರ್ತು ಕೆಲಸ ನೋಡಲು ಅಶಕ್ತರಾಗಿರುವ ಕಾರಣ ಅವರ ಗೈರ್ ಹಾಜರಿಯು ಕಾಲದಲ್ಲಿ, ಅವರಿಗಾಗಿ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ವೆ|| ವಿ. ಪಿ. ಮಾಧವರಾಯರು ಹಾಗಾನಿಯಾ ತುಮಕೂರು ನಗರ ಡಿವಿಜ್ಞ ಡಿಸ್ಟ್ರಿಕ್ಟು ವ ಸೆರ್ಷ ಜಡ್ಜ್ ಕೆಲಸ ನೋಡುವಂತೆ ಮೊಕರರಿ ಮಾಡಲ್ಪಟ್ಟಿರುತ್ತಾರೆ.

ರೂಲ್.

ಮೈಸೂರು ಗೆಜೆಟ್ಟಿಗೆ ಚಂದಾ ಹಣವನ್ನು ಪಾವತಿಮಾಡತಕ್ಕ ವಿಷಯದಲ್ಲಿ ಹಾಲಿ ಜಾರಿಯಿರುವ ನಡವಳಿತವನ್ನು ರದ್ದು ಮಾಡಿ ಇದರಡಿ ಬರುವ ನಿಬಂಧನೆಯನ್ನು ವಿಧಿಸೋಣಾಗಿರುತ್ತೆ.

ಯಿಚ್ಛೈವುಳ್ಳ ಚಂದದಾರರು, ಅವರ ಚಂದಾ ಮೊಬಲಗನ್ನು ಅತ್ಯಂತ ಸಮೀಪವಾದ ತಾಲ್ಲೂಕು ಖಜಾನೆಗೆ ಪಾವತಿ ಮಾಡಬೇಕು.

ಅಮಲ್‌ದಾರರು ಹೀಂಗೆ ಪಾವತಿ ಮಾಡೋಣಾದ ಮೊಬಲಗಿಗೆ, ಟ್ರೈಜರಿಗೆ ಬಂದ ಮೊಬಲಗ್ಗಾಗಿ ಕೊಡುವ ವಾಡಿಕೆಯಾದ ಆಚ್ಚಿನ ನಮೂನೆಯಲ್ಲಿ ದ್ವಿಪ್ರತಿ ರೀತಿಯನ್ನು ತಯಾರ್ಮಾಡಿಕೊಡತಕ್ಕದ್ದು.

ಚಂದಾದಾರನು ಡ್ಯೂಪ್ಲಿಕೇಟ್ ರೀತಿಯನ್ನು ತನ್ನಲ್ಲಿ ಯಿಟ್ಟುಕೊಂಡು, ಒರಿಜಿನಲ್ ರೀತಿಯನ್ನು ತನ್ನ ದರಖಾಸ್ತಿನ ಸಂಗಡ ಮೈಸೂರು ಗೆಜೆಟ್ ಕಂಪೈಲರವರಿಗೆ ಕಳುಹಿಸತಕ್ಕದ್ದು.

ಕಂಪೈಲರವರು ಟ್ರೈಜರಿ ರೀತಿಯನ್ನು ಹಣಬಂದಂತೆ ಒಪ್ಪಿಸಿಕೊಳ್ಳುವರು.

ತಾರೀಖು 14ನೇ ಮಾರ್ಚಿ 1890.

ನಂ. 369.—ತರೀ ಜಮೀರ್ಗಳಿಗೆ ನೀರು ಸಾಲದೇ ಹೋದದ್ದರಿಂದ ಜಮೀರ್ ಬಂಜರ್ ಬಿದ್ದದ್ದಕ್ಕಾಗಿ ಕಂದಾಯ ಮಾಫ್ ಮಾಡತಕ್ಕ ಬಗ್ಯೆ, ಸ್ರ 1886ನೇ ಇಸವಿ ಜೂನ್ 5ನೇ ಮತ್ತು 90ನೇ ನಂಬರ್ ಇಸ್ತಿಹಾರಿನಲ್ಲಿ ಘಾಯಿಷ್ ಮಾಡೋಣಾದ ನಿಬಂಧನೆಗಳನ್ನು ರದ್ದುಪಡಿಸಿ, ಇದರಡಿ ಬರುವ ಪರಿಷ್ಕರಿಸಲ್ಪಟ್ಟ ನಿಬಂಧನೆಗಳನ್ನು ಇದಕ್ಕೆ ಸಂಬಂಧಪಟ್ಟ ದರೋಬಸ್ತು ಜನಗಳ ತಿಳುವಳಿಕೆ ಬಗ್ಯೆ ಪ್ರಕಟ ಪಡಿಸೋಣಾಗಿರುತ್ತದೆ:—

1. ಕೆರೆ ಯಾ ಇತರ ಯಾವ ಜಲಾಧಾರವು ಒಡದು ಹೋಗುವಣವರಿಂದಲಾಗಲಿ ಮತ್ತ್ಯಾವ ಆಕಸ್ಮಿಕ ಸಂಭವಿಸುವಣದರಿಂದ ಲಾಗಲಿ, ಅವು ನೀರಾವರಿ ಸಾಗುವಳಿ ಕೆಲಸಕ್ಕೆ ಅನುಪಯುಕ್ತವಾದಲ್ಲಿ ಅಂಥಾ ಕೆರೆ ಯಾ ಜಲಾಧಾರ ಒಡದು ಹೋದ ಯಾ ಅದಕ್ಕೆ ಆ ಆಕಸ್ಮಿಕ ಸಂಭವಿಸಿದ ಮೊದಲನೇ ವರುಷದಲ್ಲಿಯೂ, ಪುತ್ತು ಆ ತರುವಾಯ ಅವು ಶಿಕಸ್ತಿನಲ್ಲಿಯೇ ಯಿದ್ದು ನೀರಾವರಿ ಸಾಗುವಳಿಗೆ ಅನುಪಯುಕ್ತವಾಗಿ ಯಷ್ಟು ವರುಷಗಳ ಪರ್ಯಂತ ಯಿರುತ್ತವೋ ಅವರಿವಿಗೂ ಹಂಗಾಮಿ ತರೀಕ್ ಪೂರಾ ತರೀ ಕಂದಾಯದ ಅರ್ಧ ಮೊಬಲಗನ್ನು ಬೆಂಗಾರ ಕಂದಾಯದಂತೆ ವಸೂಲ್ ಮಾಡತಕ್ಕದ್ದು. ಯಾವ ಖುಷ್ಕಿ ಫಸಲು ಯಿಟ್ಟುಕೊಂಡಾಗ್ಯೂ ಸರಿಯೇ ಬಾಕಿ ಅರ್ಧ ಕಂದಾಯವನ್ನು ಲಿಖ್ತದಲ್ಲಿ ರಿಮಿಷ್ಟ ಯಾನೆ ಮುಜರೆ ದಾಖಲ್ಮಾಡತಕ್ಕದ್ದು.

2. ಮಾಮೂಲ್ ಮೇರಿನ ನೀರನ್ನು ಉಪಯೋಗಿಸಿ ಕೊಂಡಿರಲಿ ಅಥವಾ ಉಪಯೋಗಿಸಿಕೊಂಡಿರಬಹುದಾಗಿರಲಿ, ಆ ತರುವಾಯ ಅದೇ ವರುಷದೊಳಗೆ ಬಡದು ಹೋದರೆ ಯಾ ಇತರ ಆಕಸ್ಮಿಕ ಸಂಭವಿಸಿದರೆ, ಹಿಂದಿನ ಕಲಮಿನಲ್ಲಿ ಉದಹರಿಸೋಣಾದಂತೆ ಅನುಸರಿಸದೆ ಆ ಸಾಲಿನ ಪೂರಾ ಕಂದಾಯ ವಸೂಲ್ ಮಾಡತಕ್ಕದ್ದು.

3. ಕೆರೆ ಯಾ ಇತರೆ ಜಲಾಧಾರ ಒಡದು ಹೋಗುವಣ ಯಾ ಅವುಗಳಿಗೆ ಆಕಸ್ಮಿಕ ಸಂಭವಿಸಿದಾಗ್ಯೂ ಯಾವ ಜಮೀರ್ಗಳು, ಅವು ಯಿರುವಂಥಾ ಪ್ರದೇಶದ ದೆಸೆಯಿಂದಲೇ ತರೀ ಫಸಲ್ ಯಿಡಲಿಕ್ಕೆ ಲಾಯಖಾಗಿರುತ್ತವೊ ಅಂಥಾ ಜಮೀರ್ಗಳು ಬಂದನೇ ಕಲಂನಲ್ಲಿ ಕಾಣಿಸಿರುವ ಕಂದಾಯ ಕಮ್ಮಿ ಯಾ ರಿಮಿಷ್ಟ ಹೊಂದಲಿಕ್ಕೆ ಅರ್ಹವಾಗಿರುವದಿಲ್ಲವು.

4. ಯಾವ ಸಾಲಿನಲ್ಲಿ ಒಡದು ಹೋಗೋಣ ಯಾ ಇತರ ಆಕಸ್ಮಿಕ ಸಂಭವಿಸುತ್ತೊ ಆ ವರುಷ ಡೆಪ್ಯುಟಿ ಕಮ್ಮಿಷನರಂಗಲಿಯಾ ಅವರ ಅಸಿಸ್ಟೆಂಟರುಗಳ ಪೈಕಿ ಯಾರಾದರು ಸ್ರೊಬ್ಬರು ಸಾಗುವಳಿ ಕಾಲದಲ್ಲಿ ಖುದ್ದು ನೋಡಿ ತನಿಖಿ ಮಾಡಿದ ತರುವಾಯ 1ನೇ ಕಲಮನ್ನು ಸರಿಸಿ ಹಂಗಾಮಿ ತರೀಕ್ ಕಂದಾಯ ಕಮ್ಮಿಹಾಕಲಿಕ್ಕೆ ಫಲಾನೇ ಜಮೀನುಗಳು ಅರ್ಹವಾದ್ದಾಗಿರುತ್ತವೆ ಯಂದು ಪೋಂದೇ ದಫಾ ತೀರ್ಮಾನಿಸತಕ್ಕದ್ದು.

5. ಸರ್ಕಾರದವರಿಂದ ಅಂಥಾ ಜಲಾಧಾರದ ಕೆಲಸಗಳು ಪುನಶ್ಚ ಸರಿಯಾದ ಸ್ಥಿತಿಗೆ ಬರುವ ವರಿವಿಗೂ, ಸದರೀ ಹಂಗಾಮಿ ತರೀಕ್ ಕಂದಾಯ ಕಮ್ಮಿ ಹಾಕೋಣವು ಪ್ರತಿ ಜಮಾಬಂದಿ ತರಾವಿನಲ್ಲೂ ನಡಿಯತಕ್ಕದ್ದು, ಜಮಾಬಂದಿ ಕೈದಾದ ಕೂಡ್ಲೆ ಇದಕ್ಕೆ ಲಗತ್ತು ಇರುವ ನಮೂನೆ ಮೇರಿಗೆ ಬಂದು ತಖ್ತೆಯನ್ನು ದಿವಾಣರವರ ಛೀಫ್ ಸೆಕ್ರೆಟೆರಿಯವರಿಗೆ ಕಳುಹಿಸತಕ್ಕದ್ದು.

6. ಈ ಮೇಲೆಹೇಳೋಣಾದ ನಿಬಂಧನೆಗಳನ್ನನುಸರಿಸಿ ಯಿರದೇ ಯಿರುವ ಸಂಗತಿಗಳಲ್ಲಿ, ಗವರ್ನ್‌ಮೆಂಟ್‌ನವರಿಂದ ಮುಂಚಿತವಾಗಿ ಮಂಜೂರಾತಿ ಪಡೆಯದೇ ರಿಮಿಷ್ಟ ಯಾನೆ ಮುಜರೆಯನ್ನು ಕೊಡಲೇ ಕೂಡದು.

7. ಹಾಲೀ ಜಾರೀಲಿರುವ ತರೀ ಕಂದಾಯದ ದರಗಳನ್ನು, ನೀರಾವರಿ ಆಧಾರದ ಮೌಲ್ಯದ ಮೇಲೂ, ಸುಭಿಕ್ಷ ದುರ್ಭಿಕ್ಷ ಕಾಲಗಳ ಸರಾಸರಿಯ ಪೂರಾ ಆಲೋಚನೇ ಮೇಲೂ ತೆಗವ ಮಾಡೋಣಾಗಿರುತ್ತದೆ ಯಾಗಿ ಯಿಂಥಾ ದರಗಳು, ಜಮೀನು ಬಂಜರ್‌ನಲ್ಲಿ ಯಿಡಲ್ಪಟ್ಟಿದ್ದವೆಂಬ ಸಬಬಿನ ಮೇಲೆ ಕಮ್ಮಿಯಾಗತಕ್ಕದ್ದಲ್ಲವು.

8. ಅಪರೂಪ ಸಾಲ್‌ಗಳಲ್ಲಿ, ಮಳೆ ಕೇವಲ ಕಡಿಮೆಯಾಗಿ ಬಿದ್ದು ಅದರ ದೆಸೆಯಿಂದ ಬೆಳೆಗೆ ಲುಕ್ಸಾನ್ ಸಂಭವಿಸಿರುವ ನಿರ್ದಿಷ್ಟ ಪ್ರದೇಶಗ್ಗಾಗಿ ಜಮೀರ್ ಕಂದಾಯವನ್ನು ವಿಶೇಷವಾದ ರಿಮಿಷ್ಟ ಯಾನೆ ಮುಜರೆ ಕೊಡಲು ಹುಕ್ಕುಂ ಕೊಡುವ ಕೆಲಸವು ಗವರ್ನ್‌ಮೆಂಟಿನವರದಾಗಿರುತ್ತೆ.

ಸ್ನ 1890ನೇ ಇಸವಿ ಮಾರ್ಚಿ 5ನೇ ಮತ್ತು ಸಂ 9792—800—214ನೇ ನಂಬರುಳ್ಳ ದಿವಾಣರವರ ಪ್ರೊಸೀಡಿಂಗ್ಸ್ ಅನುಸರಿಸಿ ಹಂಗಾಮಿ ತರೀಕು ಕೊಡೋಣಾದ ರಿಮಿರ್ಷ ತಖ್ತಾ.

1	2	3	4	5	6	7	8	9	10
ತಾಲ್ಲೂಕು.	ಗ್ರಾಮ.	ಕೆರೆಯ ಜಾಗೀರದಾರರ ಹೆಸರು.	ಬಿಡಲು ಕೋರಿದ ಯಾ ಇತರ ಅರ್ಜಿಯ ಸಂಖ್ಯೆಯನ್ನು ಇಲ್ಲಿ ಬರೆಯಿರಿ.	ಜಂಜರ್ ನಂಬರು.	ಖಾತೇದಾರನ ಹೆಸರು.	ಖಾತೆಯ ಲೆಖ್ಖದ 7ನೇ ಮೇರಿಗೆ ತರೀ ಸಾಗುವಳಿಯಕ್ಕುಳ್ಳು ಬೀಜವರಿ.	7ನೇ ಮೇಸ್ತಕಿ ನಲ್ಲಿ ನಮೂದಾಗಿರುವ ಹಿಡುವಳಿಯ ಮೇಲೆ ಪೊಟ್ಟು ತರೀ ಕಂದಾಯ.	ಹುಕುಮಿನ 3ನೇ ಕಲಮಿನು ಸರಿಸಿ ಹಂಗಾಮಿ ತರೀಕುರಿಮಿರ್ಷ ಮಾಡೋಣಾದ ಅರ್ಧ ಮೊಬಲಗು.	ಷರಾ. (ಪ್ರತಿ ಕೆರೆಯ ವಿಷಯದಲ್ಲೂ ಖಾತಾಯತಿಗಳು ಪೂರೈಸಿದ ತರುವಾಯ ಅಂಥಾ ಪ್ರತಿ ಕೆರೆಯ ಕೆಳಗೆ ಹಿಡುವಳಿಯಲ್ಲಿ ಯಿರುವ ಕಪ್ಪು ತರಿ ಬೀಜವರಿಯನ್ನೂ ಮತ್ತು ಹುಕುಮಿನ 4ನೇ ಕಲಮಿಗೆ ಪ್ರೊಳಪಡುವ ಸಬಬು ರಿಮಿರ್ಷ ಕೊಡದೇ ತಳ್ಳುಪಡೀ ಮಾಡೋಣಾದ ಬೀಜವರಿಯನ್ನು ಸಹ ಈ ಮೇಸ್ತಕಿನಲ್ಲಿ ದಾಖಲ್ಮಾಡತಕ್ಕದ್ದು.)

ತಾರೀಖು 27ನೇ ಮಾರ್ಚ 1890.

ನಂ. 372.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡಿ ವ ಕಾಯಂಗುತ್ತಾದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ವ ಕಾಯಂಗುತ್ತಾ ಗ್ರಾಮಗಳು ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಶುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮಗಳು ಒಡ ದರಖಾಸ್ತುದಾರರಿಗೆ ಹರಾಜ್ ನಿಲ್ಲುವದು.

2. ಪರಂತು ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ ಡೆಪ್ಯೂಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ್ ಪೈಕಿ ಕೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕಿ ಬಾಕಿಯನ್ನು ಹರಾಜ್ ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತನ್ನ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಆಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜ್ ಮುಕೂಫ್ ಮಾಡಲ್ಪಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮ್ಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಜಿಸ್ಟರ್ ಮಾಡಲ್ಪಟ್ಟು, ಡೆಪ್ಯೂಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲನಲ್ಲಾಗಲಿ ಅಂದಾಜು ಬೀಜವರಿ ವಿಷಯದಲ್ಲಾಗಲಿ, ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗ.ವ ಆಖೈರ್ ಹುಕುಮಿಗೆ ಸದರೀ ಕ್ರಯವು ಬಳಪಟ್ಟು ಯಿರುತ್ತೆ.

ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡಿ ವ ಕಾಯಂಗುತ್ತಾದಾರರ ಹೆಸರು.	ಅಂದಾಜು ಬೀಜವರಿ.	ಅಂದಾಜು ಹುಟ್ಟುವಳಿಗೆ ಯಾಜಬೇಕಾದ ಕ್ವಿಟ್‌ರೆಂಟ್.	ಸಾಲಿಯಾನಾ ಸರಕಾರಕ್ಕೆ ಕೊಬೇರೀಜು.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕಿ.			ಹರಾಜು ತಾರೀಖು ವಗೈರೆ.
				ಖ. ಕು. ಪ.	ರೂ. ಆ. ಪೈ.	ರೂ. ಆ. ಪೈ.	ರೂ.	ಆ.	ಪೈ.	
ಕೋಲಾರ.	ಕೋಲಾರ.	ಜಂಬಾಪುರ ಜೋಡಿಗ್ರಾಮ.	ವೆಂಕಟರಮಣಭಟ್ಟ ವಗೈರೆ.	19 13 8	206 0 0	155 1 3				
					1884—85ನೇ ಸಾಲ್ ಬಗೆ		21	2	8	1890ನೇ ಇಸವಿ ಏಪ್ರಿಲ್ ತಾರೀಖು 29ರಲ್ಲು ತಾಲ್ಲೂಕು ಕಚೇರಿಯಲ್ಲಿ ಅವಲೆದಾರ್ರ ರೂಬರೂ
					1885—86ನೇ ಡಿಟೋ		33	7	6	
					1886—87ನೇ ಡಿಟೋ		54	0	2	
					1887—88ನೇ ಡಿಟೋ		43	12	4	
					1888—89ನೇ ಡಿಟೋ		55	1	3	
					1889—90ನೇ ಡಿಟೋ		140	0	0	
					ಲೋಕಲ್‌ಸೆಸ್ ..		15	1	3	
					ಬಾಂಡ್ ಲಾಗವಡು ..		3	4	2	
						ನೋಟಿಸ್ ಫಿ.	1	0	0	
						ಜುಮ್ಲಾ ..	366	13	4	
						ವ ಹರಾಜಿತಾ				

ಜಿಲ್ಲೆ.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡಿ ವ ಕಾಯಂ ಗುತ್ತಾದಾರರ ಹೆಸರು.	ಅಂದಾಜು ಬೀಜವರಿ.	ಅಂದಾಜು ಪುಟ್ಟುವಳಿ ಯಾ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟೆರೆಂಟ್.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರ್ಕಾರದ ಕಂದಾಯದ ಬಾಕಿ.	ಹರಾಜ್ ತಾರೀಖು ವಗೈರೆ.
					ಖಂ. ಕು. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಕೋಲಾರ.	ಕೋಲಾರ.	ಸುಗಟೂರು.	ಮೋಟನಹಳ್ಳಿ ಜೋಡೀ ಗ್ರಾಮ	ತಿಮ್ಮರಾಯಪ್ಪ ವಗೈರೇರು	69 19 2	296 11 8	242 8 9		
						1885—86	ನೇ ಸಾಲ್ ಬಗೆ	7 2 11	1890ನೇ ಇಸವಿ ಏಪ್ರೆಲ್ ತಾರೀಖು 29ರಲ್ಲು ತಾಲ್ಲೂಕ್ ಕಚೇರಿಯಲ್ಲಿ ಅಮಲ್ದಾರ್ರು ರೂಬರೂ
						1887—88	ನೇ ಡಿಟೋ	29 0 6	
						1888—89	ನೇ ಡಿಟೋ	14 5 4	
						1889—90	ನೇ ಡಿಟೋ	189 8 9	
							ಜುಮ್ಲಾ ..	240 1 6	
							ವ ಹರಾಜ್ ತಾರೀಖು ವರಿಗೂ ಬಡ್ಡಿ ಸಹಾ		
			ತಲೆಗೊಂಡಪುರಹಳ್ಳಿ ಕಾಯಂ ಗುತ್ತಾ ಗ್ರಾಮ.	ರಾಮಾಶಾಸ್ತ್ರಿ ವ ಚಂದ್ರಶೇಖರಯ್ಯ	10 4 12	71 7 10	39 1 7		
						1882—83	ನೇ ಸಾಲ್ ಬಗೆ	14 15 7	ಡಿಟೋ
						1883—84	ನೇ ಡಿಟೋ	19 8 9	
						1884—85	ನೇ ಡಿಟೋ	20 8 9	
						1885—86	ನೇ ಡಿಟೋ	0 1 0	
						1889—90	ನೇ ಡಿಟೋ	36 0 0	
						ಲೋಕಲ್‌ಸೆಸ್	..	3 1 7	
						ನೋಟಿಸ್ ಫಿ.	..	2 0 0	
							ಜುಮ್ಲಾ ..	96 3 8	
							ವ ಹರಾಜ್ ತಾರೀಖು ವರಿಗೂ ಬಡ್ಡಿ ಸಹ		
		ನೇನಗಲ್ಲು.	ಕ್ಯಾಲ್ನಾಡ್ ಕಾಯಂಗುತ್ತಾ ಗ್ರಾಮ	ದೇವನಹಳ್ಳಿ ಅಪ್ಪಾಜಯ್ಯ	62 19 4	1358 13 5	1508 2 5		
						1876—77	ನೇ ಸಾಲ್ ಬಗೆ	156 13 2	ಡಿಟೋ
						1877—78	ನೇ ಡಿಟೋ	197 6 5	
						1878—79	ನೇ ಡಿಟೋ	197 6 5	
						1879—80	ನೇ ಡಿಟೋ	214 15 5	
						1880—81	ನೇ ಡಿಟೋ	227 7 6	
						1881—82	ನೇ ಡಿಟೋ	343 14 7	
						1882—83	ನೇ ಡಿಟೋ	240 3 9	
						1883—84	ನೇ ಡಿಟೋ	244 11 8	
						1884—85	ನೇ ಡಿಟೋ	245 4 5	
						1885—86	ನೇ ಡಿಟೋ	259 10 2	
						1886—87	ನೇ ಡಿಟೋ	286 4 5	
						1887—88	ನೇ ಡಿಟೋ	286 4 5	
						1888—89	ನೇ ಡಿಟೋ	286 4 5	
						1889—90	ನೇ ಡಿಟೋ	908 2 5	
						ಬಾಂಡ್ ಲಾಗವಡು	..	18 9 6	
							ನೋಟಿಸ್ ಫಿ.	1 0 0	
							ಜುಮ್ಲಾ ..	4114 6 6	
							ವ ಹರಾಜ್ ತಾರೀಖು ವರಿಗೂ ಬಡ್ಡಿ ಸಹ		

ಜಿಲ್ಲೆಗಳು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡಿವ ಕಾಯಂಗುತ್ತಾದಾರರ ಹೆಸರು.	ಅಂದಾಜಾ ಬೀಜವರಿ.	ಅಂದಾಜಾ ಹುಟ್ಟುವಳಿ ಯಾ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್,	ಯಾವ ಬಾಕಿಗೋ ಸ್ತ್ರರ ಗ್ರಾಮವು ಹರಾಜ್ ಮಾಡಲ್ಪಟ್ಟು ತ್ತೋ ಆಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
					ಖಂ. ಕು. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಕೋಲಾರ.	ಬೆಂಗಾವಣಿ	ಸುಗಟೂರು.	ಪಮ್ಮಗಾನಹಳ್ಳಿ ಕಾಯಂಗು ತ್ತಾ ಗ್ರಾಮ	ರಾಮಚಂದ್ರರಾವ್ ಮಧ್ವರಾವ್ ವ ಗೋಜಮ್ಮ	6 5 0	52 5 10	38 0 9		
						1877—78 ನೇ ಸಾಲ್ ಬಗೆ		18 3 6	1890ನೇ ಇಸವಿ ಏಪ್ರೆಲ್ ತಾರೀಖು 29ರಲ್ಲು ತಾಲ್ಲೂಕು ಕಚೇರಿಯಲ್ಲಿ ಅಮಲ್‌ದಾರ್ರರೂ ಬರೂ
						1878—79 ನೇ ಡಿಟೋ		35 0 0	
						1879—80 ನೇ ಡಿಟೋ		35 0 0	
						1880—81 ನೇ ಡಿಟೋ		35 0 0	
						1881—82 ನೇ ಡಿಟೋ		35 0 0	
						1882—83 ನೇ ಡಿಟೋ		35 0 0	
						1883—84 ನೇ ಡಿಟೋ		35 0 0	
						1884—85 ನೇ ಡಿಟೋ		35 0 0	
						1885—86 ನೇ ಡಿಟೋ		35 0 0	
						1886—87 ನೇ ಡಿಟೋ		35 0 0	
						1887—88 ನೇ ಡಿಟೋ		3 9 2	
						1888—89 ನೇ ಡಿಟೋ		35 0 0	
						ಲೋಕಲ್‌ಸೆಸ್ ..		25 2 10	
						ಬಾಂಡ್ ಲಾಗವಡು ..		2 6 0	
						ನೋಟಿಸ್ ಫೀ		5 0 0	
						ಜುಮ್ಲಾ .. ವ ಹರಾಜ್ ತಾರೀಖು ವರಿಗೂ ಬಡ್ಡಿ ಸಹ		404 5 6	

ಷರಾ.—ಜೋಡಿವ ಕಾಯಂಗುತ್ತಾದಾರರುಗಳಿಂದಲಾಗಲಿ, ಬಾಧ್ಯತೆಯ ಮೂಲಕ ಯಿವರುಗಳಿಗೆ ಹಿಂದೆ ಯಿದ್ದವರಿಂದಲಾಗಲಿ ಉಂಟುಮಾಡಲ್ಪಟ್ಟು ತಮಾಂ ಹಿಡುವಳಿ ಯಾ ದೇಣಿಗೆಗಳಿಗಾಗಲಿ ಮತ್ತು ಹಕ್ಕುಗಳಿಗಾಗಲಿ ಅಥವಾ ಮತ್ತಾವ ಸಂಬಂಧಗಳಿಗಾಗಲೀ ಸದರೀ ಹರಾಜು ವಳಪಟ್ಟಿರುವದಿಲ್ಲ.

ತಾರೀಖು 24ನೇ ಮಾರ್ಚಿ 1890.

ಕ್ಯಾಂಪ್ ನಂ. 1141.—ಸ್ ೧೮೮೫ನೇ ಇಸವಿಯ 6ನೇ ಆಕ್ಟಿನಿಂದ ತಿದ್ದುಪಡಿಯಾಗಿ, 1885ನೇ ಇಸವಿಯ 3ನೇ ರೆಗ್ಯುಲೇಷ್ನ ಪೆಕೆಯಿಂದ ಮೈಸೂರ ೀವೆಯೊಳಗೆ ಜಾರಿಗೆ ತರಲ್ಪಟ್ಟ 1881ನೇ ಇಸವಿಯ XXIIನೇ ನಂಬರುಳ್ಳ ಯಕ್ಸೈಜ್ ಆಕ್ಟಿನ 55ನೇ ಸೆಕ್ಷನಿನ (e) ಗುರ್ತುಳ್ಳ ಕಲಮಿನಲ್ಲಿ ನಮೂದಿರುವ ನಿಬಂಧನೆಗಳನ್ನನುಸರಿಸಿ, ಸದರೀ ಆಕ್ಟಿನ ಮೇರ್ಗೆ ಸರಕಾರಕ್ಕೆ ದಾಖಲ್ಮಾಡಲ್ಪಡುವಂಥಾ ಸಾರಾಯಿ ವಗೈರೆಯ ವಿಲೇವಾರಿ ಬಗ್ಯಾಗಿ ಇದರಡಿ ಬರುವ ನಿಬಂಧನೆಗಳನ್ನ ಶ್ರೀಮನ್ಮಹಾರಾಜಾ ಸರ್ಕಾರದವರು ಅಪ್ಪಣೆ ಕೊಡಿಸಿರುತ್ತಾರೆ.

(1.) ಯಕ್ಸೈಜ್ ಆಕ್ಟನುಸರಿಸಿ ಸರ್ಕಾರಕ್ಕೆ ದಾಖಲ್ಮಾಡಲ್ಪಡಬಹುದಾದ ವಿಸಿಪ್ಟ ಸಾರಾಯಿ, ಯಾ ಇತರ ಅಜಬಾಬುಗಳು ಅಂದರೆ ಭಟ್ಟಿಗಳು, ತೊಪ್ಪಿಗಳು ಯಾ ಇತರ ಸಾಮಾನು, ಜಾಡಿಗಳು, ೀಷಾಯಿಗಳು ವ ಸಾರಾಯಿಯ ಉವದಕ್ಕಾಗಿ ಉಪಯೋಗಿಸಲ್ಪಡುವ ಯಾ ಸಾರಾಯಿಯನ್ನ ಜಮಾಯಿಸಿ ಇಡಲಿಕ್ಕಾಗಲಿ, ಸಾಗಿಸಲಿಕ್ಕಾಗಲಿ ಉಪಯೋಗಿಸ ರ ಪಾತ್ರೆಗಳು ಹರಾಜ್ ಮೂಲಕ ವಿಕ್ರಯಿಸಲ್ಪಟ್ಟು ಹುಟ್ಟುವಳಿ ಆದ ಮೊಬಲಗು ಸರ್ಕಾರಕ್ಕೆ ಜಮಾ ದಾಖಲಾಗತಕ್ಕದ್ದು. ಮೊಕದ್ದಮೆ ದ್ಯಾಫ್ಟಿ ಮಾಡಿದ ಮೇಜಸ್ಟ್ರೇಟರು ಸಮಾಚಾರ ಕೊಟ್ಟ ಮನುಷ್ಯನಿಗಾಗಲಿ ಯಾ ಇತರರಿಗಾಗಲಿ ಸಲ್ಲಬೇಕಾದ್ದಿಷ್ಟೆಂದು ನಮೂದಿಸುವ ಮೊಬಲಗು ಸದರೀ ಹುಟ್ಟುವಳಿ ಮೊಬಲಗಿ ಪೈಕಿ ಪಾವತಿಯಾಗತಕ್ಕದ್ದು.

(2.) ಪರಂತು ಅಂಥಾ ಸಾರಾಯಿಯೊಳಗೆ ಅನಾರೋಗ್ಯಕರವಾದ ಪದಾರ್ಥವೇನಾದರೂ ಮಿಶ್ರಮಾಡಲ್ಪಟ್ಟಿದ್ದಾಗ್ಯೂ ಅಥವಾ ಮನುಷ್ಯರು ಕುಡಿಯುವದಕ್ಕೆ ಯಾವ ರೀತಿಯಿಂದಲಾಗಲಿ ಅನರ್ಹವನ್ನಾಗಿ ಮಾಡಲ್ಪಟ್ಟಿದ್ದಾಗ್ಯೂ, ಅಂಥಾ ಸಾರಾಯಿಯು ನಾಶಮಾಡಲ್ಪಡತಕ್ಕದ್ದು.

(3.) ಅಂಥಾ ಸಾರಾಯಿಯ ತೇದಾದು ಯರೆಡು ಇಂಪೀರಿಯಲ್ ಗ್ಯಾಲನ್‌ಗಳಿಗಿಂತಲೂ ಜಾಸ್ತಿಯಾಗಿದ್ದರೆ, ಅದರ ವಿಲೇವಾರಿ ಬಗ್ಯಾಗಿ ಯಕ್ಸೈಜ್ ಕಮಿಷ್ನರವರ ಅಪ್ಪಣೆಯನ್ನ ಪಡೆಯತಕ್ಕದ್ದು.

ತಾರೀಖು 1ನೇ ಏಪ್ರಿಲ್ 1890.

ನಂ. 374.—ಬೆಂಗಳೂರು ಡಿಸ್ಟ್ರಿಕ್ಟು ದೇವನಹಳ್ಳಿ ತಾಲ್ಲೂಕು ಅಮಲ್ದಾರ್ ಟಿ. ಬಾವಾರಾಯರಿಗೆ, 1889ನೇ ಇಸವಿ ಫಿಬ್ರವರಿ 5ನೇ ಮತ್ತು ಂ 7140—71—200ನೇ ನಂಬರುಳ್ಳ ಪ್ರೊಸಿಡಿಂಗ್ಸಿನ ನಿಬಂಧನೆ ಅನುಸರಿಸಿ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 5 ದಿವಸಗಳ ಕ್ಯಾಜ್ಯುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 3ನೇ ಏಪ್ರಿಲ್ 1890.

ಕ್ಯಾಂಪ್ ನಂ. 10.—ಹಾಸನ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ್ ಮೆ॥ ಪಿ. ಯರ್. ಪೂರ್ಣಯ್ಯನವರಿಗೆ, 1890ನೇ ಇಸವಿ ಏಪ್ರಿಲ್ 10ರ ಲಾಗಾಯತು ಯಾ ಆ ತರುವಾಯ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ಎರಡು ತಿಂಗಳ ಪ್ರೈವೇಟ್ ಅಫೇರ್ಸ್ ರಜಾ ಕೊಡಲ್ಪಟ್ಟಿರುತ್ತೆ.

ಮೆ॥ ಪೂರ್ಣಯ್ಯನವರು, ರಜಾದ ಮೇಲೆ ಯಿರುವ ಪರ್ಯಂತ ಯಾ ಮತ್ತೊಂದು ಹುಕುಂ ಕೊಡುವ ವರೆವಿಗೂ ಮೆ॥ ಸಿ. ಮಾದಯ್ಯನವರು ಹಾಸನ ಡಿಸ್ಟ್ರಿಕ್ಟಿನ ಡೆಪ್ಯೂಟಿ ಕಮ್ಮಿಷನರ್ ವ ಡಿಸ್ಟ್ರಿಕ್ಟು ಮಾಜಿಸ್ಟ್ರೇಟ್ ಕೆಲಸವನ್ನ ಅಫಿಷಿಯೇಟಿಂಗ್ ತರೀಕ್ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಮೆ॥ ಮಾದಯ್ಯನವರು ಜೇರೆ ಕೆಲಸದ ಮೇಲೆ ಯಿರುವ ಪರ್ಯಂತ ಯಾ ಮತ್ತೊಂದು ಹುಕುಂ ಕೊಡುವ ವರೆವಿಗೂ ಮೆ॥ ನಾ ಮಕಲ್‌ರಾಯರು ಫ್ರೆಂಚ್‌ರಾಕ್ಸಿನ ಸಬ್ ಡಿವಿಜ್ ಆಫಿಸರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಕ್ಯಾಂಪ್ ನಂ. 14.—ಮೆ॥ ಯರ್. ನಂಜರಾಜೇ ಅರಸಿನವರು ಮೈಸೂರು ಡಿಸ್ಟ್ರಿಕ್ಟು ಟ್ರೈಜರಿ ಚಾರ್ಜನ್ನ 1890ನೇ ಇಸವಿ ಮಾರ್ಚಿ 26ನೇ ತಾರೀಖಿನ ಮಧ್ಯಾನ್ಹಾತ್ಸರ ಮೆ॥ ಈ. ಚಿದಂಬರಯ್ಯನವರಿಗೆ ಒಪ್ಪಿಸಿರುತ್ತಾರೆ.

ತಾರೀಖು 7ನೇ ಏಪ್ರಿಲ್ 1890.

ಕ್ಯಾಂಪ್ ನಂ. 32.—ಗೋರಿಬಿದನೂರು ತಾಲ್ಲೂಕು ಅಮಲ್ದಾರ್ ಬಿ. ರಾಮಸ್ವಾಮಿಯ್ಯರ್ ಬಿ. ಎ. ಯವರು, ಅಜಮಾಯಿಷಿ ತರೀಕ್ 4ನೇ ಗ್ರೇಡ್ ಅಸಿಸ್ಟೆಂಟ್ ಕಮ್ಮಿಷನರ ಕೆಲಸವನ್ನ ಆಕ್ಟಿಂಗ್ ತರೀಕ್ ನೋಡುವಂತೆ ಮೊಕರರ್ ಮಾಡಲ್ಪಟ್ಟು ಹಂಗಾಮಿಯಾಗಿ ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ನೇಮಕ ಮಾಡಲ್ಪಟ್ಟಿರುತ್ತಾರೆ. ಕೂಡ್ಲೆ ಕೆಲಸದಮೇಲೆ ದಾಖಲಾಗತಕ್ಕದ್ದು.

ಕ್ಯಾಂಪ್ ನಂ. 36.—ನಗರ ತಾಲ್ಲೂಕು ಅಮಲ್ದಾರ್ ಟಿ. ಯಂ. ನಾರಣಯ್ಯನವರು, ಗೋರಿಬಿದನೂರು ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ವರ್ಗ ಮಾಡಲ್ಪಟ್ಟಿರುತ್ತಾರೆ.

ಶಿವಮೊಗ್ಗ ಡಿಸ್ಟ್ರಿಕ್ಟು ಆಫಿಸ್ ರೆವಿನ್ಯೂ ಹೆಡ್ ಮುನಷಿ ಕೇ. ಜಿ. ಅನಂತರಾಮಯ್ಯಂಗಾರ್ರು, ವರ್ಗವಾದ ಟಿ. ಯಂ. ನಾರಣಯ್ಯನವರಿಗೆ ಬದಲಾಗಿ ನಗರ ತಾಲ್ಲೂಕಿನ ಅಮಲ್ದಾರ್ ವ 3ನೇ ಕ್ಲಾಸ್ ಅಮಲ್ದಾರಿ ಕೆಲಸವನ್ನ ಆಕ್ಟಿಂಗ್ ತರೀಕ್ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಕ್ಯಾಂಪ್ ನಂ. 40.—ಇದರಡಿ ನಮೂದಾಗುವ ಅಸಿಸ್ಟೆಂಟ್ ಕಮ್ಮಿಷನರುಗಳ ವರ್ಗಾವರ್ಗಿಯನ್ನ ಮಂಜೂರ್ಮಾಡೋಣಾಗಿರುತ್ತದೆ.

1. ಬೆಂಗಳೂರಲ್ಲಿ ಕೆಲಸನೋಡುತ್ತಿರುವ ಮೆ॥ ಬಿ. ಜೆ. ಕೃಷ್ಣಯ್ಯಂಗಾರ್ರು ಜನರಲ್ ಡ್ಯೂಟಿಗಾಗಿ ಹಾಸನ ಡಿಸ್ಟ್ರಿಕ್ಟಿಗೆ ವಾಪಸ್ ಹೋಗತಕ್ಕದ್ದು.

2. ಮೆ॥ ಬಿ. ಕೃಷ್ಣಯ್ಯಂಗಾರ್ರು ಜನರಲ್ ಡ್ಯೂಟಿಗಾಗಿ ಮೈಸೂರು ಡಿಸ್ಟ್ರಿಕ್ಟಿಗೆ ವರ್ಗಮಾಡಲ್ಪಟ್ಟಿರುತ್ತಾರೆ.

3. ಮೆ॥ ಯಂ. ಅಂಣಾಜಿರಾಯರು ಜನರಲ್ ಡ್ಯೂಟಿಗಾಗಿ ಮೈಸೂರು ಡಿಸ್ಟ್ರಿಕ್ಟಿನಿಂದ ಬೆಂಗಳೂರು ಡಿಸ್ಟ್ರಿಕ್ಟಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ.

ತಾರೀಖು 11ನೇ ಏಪ್ರಿಲ್ 1890.

ನಂ. —ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೊಸ್ಕರ ಕ್ರಮಪ್ರಕಾರ ಜಪ್ತಿ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿಸುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳ್ಗ್ಯೆ 11 ಘಂಟೆಗೆ ಹರಾಜು ಪುರುವಾಗಿ ಉಂಕೆ ಯಾವದೂ ಇಲ್ಲದೆ ಗ್ರಾಮವು ಜಡದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯೂಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ ಪೈಕಿ ಕೀಕಡಾ 25 ರೂಪಾಯಿ ಡಿಪಾಜಿಟಿ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟಿ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟಿ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್‌ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುಕಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿ ಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜು ಮುವ್ಕೂಫ್ ಮಾಡಲ್ಪಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಖಾಯಮಾದ್ದಾಗಿರುವದಿಲ್ಲವೆ.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡಿಪ್ಯೂಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿರ್ವಾರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ವಳಪಟ್ಟು ಯಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬ್ಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೀಜವರಿ.	ಅಂದಾಜಾ ಹುಟ್ಟುವಳಿ ಯಾ ಪೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಆಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
					ಎ. ಗು. ಗ.	ರೂ. ಆ. ಪೈ.	ರೂ. ಆ. ಪೈ. ಸೆಸ್ ದೇಖೀಲ್	ರೂ. ಆ. ಪೈ.	
ಬೆಂಗಳೂರು.	ದೇವನಹಳ್ಳಿ	ಕಾಂದಾಣಿ	ಹೆಗ್ಗನಹಳ್ಳಿ ಜೋಡಿ ಗ್ರಾಮ	ಲಕ್ಷ್ಮೀನೃಸಿಂಹಶಾಸ್ತ್ರಿ ಜ್ಯೋಲಾಪತಿಶಾಸ್ತ್ರಿ ವಗೈರೇರು	606 4 0	395 0 0	219 11 0		ಸ್ಯ 1890ನೇ ಇಸವಿ ಮೇ ತಾರೀಖು 12ರಲ್ಲು ತಾಲ್ಲೂಕು ಕಚೇರಿಯಲ್ಲಿ ಅಮಲ್‌ದಾರ್ರ ರೂಬರೂ
							1881—82 ನೇ ಸಾಲ್‌ಬಗೆ	29 9 0	
							1882—83	9 12 9	
							1883—84	55 2 0	
							1884—85	13 6 8	
							1885—86	56 4 11	
							1886—87	81 10 10	
							1887—88	51 5 9	
							1888—89	0 0 0	
							1889—90 ನೇ ಸಾಲ್ ಬಗೆ	185 6 4	
							ಜುಮ್ಲಾ	482 10 3	
							ನೋಟಿಸ್ಸಿಫವ ಬಡ್ಡಿ ದೇಖೀಲ್		

ಪರಾ—ಜೋಡೀ ದಾರರುಗಳಿಂದಲಾಗಲಿ, ಬಾಧ್ಯತೆಯ ಮೂಲಕ ಇವರುಗಳಿಗೆ ಹಿಂದೆ ಯಿದ್ದವರಿಂದಾಗಲಿ ಉಂಟುಮಾಡಲ್ಪಟ್ಟ ತಮಾಂ ಹಿಡುವಳಿಗಳಿಗೂ ದೇಣಿಗೆಗೂ ಮತ್ತು ಹಕ್ಕುಗಳಿಗೂ ಅಥವಾ ಮತ್ಯಾವ ಸಂಬಂಧಗಳಿಗೂ ಸದರೀ ಹರಾಜು ವಳಪಟ್ಟಿರುವದಿಲ್ಲ.

ಹುಕುಂ ಬಮೋಜೀಬ್,
ಟಿ. ಆನಂದರಾವ್,
ಚೀಫ್ ಸೆಕ್ರಿಟೆರಿ.